ಮೂಲತಃ ಶಿವಮೊಗ್ಗದವರಾದ ಡಿ.ಎನ್. ಶ್ರೀನಾಥ್ ಅವರು ಹಿಂದಿ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಸಮಿತಿ ಪ್ರೌಢಶಾಲೆಯಲ್ಲಿ ಸಹ ಶಿಕ್ಷಕರಾಗಿ ನಂತರ ಶಾರದಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ನಿವೃತ್ತರಾದರು. ಅನುವಾದ ಅವರ ಪ್ರೀತಿಯ ಕ್ಷೇತ್ರ. ಭಾರತೀಯ ಭಾಷೆಗಳಲ್ಲಿ ಪ್ರಕಟವಾದ ಪ್ರಮುಖ ಕೃತಿಗಳನ್ನು ಕನ್ನಡದ ಓದುಗರಿಗೆ ಪರಿಚಯಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ ಸೇರಿದಂತೆ ಅನೇಕ ಪುರಸ್ಕಾರಗಳು ಅವರ ಕೆಲಸವನ್ನು ಗೌರವಿಸಿ ಸಂದಿವೆ.

ಮೆಕ್ಕೆಜೋಳದ ಹಿಟ್ಟಿಗೆ ಮಸಾಲೆ-ಉಪ್ಪು ಸೇರಿಸಿ ರೊಟ್ಟಿಗಳನ್ನು ಬೇಯಿಸುತ್ತಿದ್ದಳು. ಟೇಪಚೂ ಕೆಲಸದ ನಡುವೆ, ಮಧ್ಯಾಹ್ನದ ವೇಳೆಯಲ್ಲಿ ಆ ರೊಟ್ಟಿಗಳನ್ನು ತಿಂದು ಎರಡು ಲೋಟ ನೀರು ಕುಡಿಯುತ್ತಿದ್ದ.

ಇಷ್ಟೆಲ್ಲಾ ಕಠಿಣ ಪರಿಶ್ರಮದ ನಂತರವೂ ಟೇಪಚೂ ಮೈತುಂಬಿಕೊಂಡು ಬಲಶಾಲಿಯಾಗುತ್ತಿದ್ದ. ಅವನ ಮಣಿಕಟ್ಟಿನ ಎಲುಬುಗಳು ಅಗಲಗೊಂಡವು, ಮಾಂಸಖಂಡಗಳು ಗಟ್ಟಿಮುಟ್ಟಾದವು. ಕಣ್ಣುಗಳಲ್ಲಿ ಒಂದು ರೀತಿಯ ದರ್ಪ ಮತ್ತು ಸಿಟ್ಟು ಮನೆಮಾಡಿತು. ಅಂಗೈಗಳು ಕಬ್ಬಿಣದಂತೆ ಗಡುಸಾದವು.

ಒಂದು ದಿನ ಟೇಪಚೂ ಹದಿಹರೆಯದ ಯುವಕನಾದ.

ಟೇಪಚೂ ಬೆವರಿಳಿಸಿ, ದುಡಿದು, ಹಸಿವು ಮತ್ತು ಅವಮಾನಗಳನ್ನು ಸಹಿಸಿದ್ದ; ದುರ್ಘಟನೆಗಳು ಮತ್ತು ಭಯಾನಕ ಪ್ರವಾಹವನ್ನು ಸೀಳಿ ಹೊರಬಂದಿದ್ದ. ಅವನ ಮುಖದಲ್ಲಿ ಸೋತ ಅಥವಾ ದುಃಖದ ಭಾವನೆಗಳು ಎಂದೂ ಮೂಡಲಿಲ್ಲ.

ಅವನ ಹುಬ್ಬುಗಳನ್ನು ನೋಡಿದಾಗ ಅವನಲ್ಲಿ ಕ್ರೋಧ ಅಥವಾ ಜುಗುಪ್ಸೆಯ ಭಾವನೆಗಳು ಮನೆಮಾಡಿಕೊಂಡಿರುವುದನ್ನು ಕಾಣಬಹುದಿತ್ತು.

ನಾನು ಈ ನಡುವೆ ಹಳ್ಳಿಯನ್ನು ಬಿಟ್ಟೆ, ಬೈಲಾಡಿಲಾದ ಐರನ್ ಓರ್ ಮಿಲ್ಲಿನಲ್ಲಿ ನೌಕರಿ ಮಾಡಲಾರಂಭಿಸಿದೆ. ಈ ನಡುವೆ ಫಿರೋಜಾ ಸಾವನ್ನಪ್ಪಿದ್ದಳು. ಬಾಲದೇವ, ಸಂಭಾರೂ ಮತ್ತು ರಾಧೆಯೊಂದಿಗೆ ಹಳ್ಳಿಯ ಅನೇಕ ಜನರು ಬೈಲಾಡಿಲಾದಲ್ಲಿ ಕೂಲಿ ಕೆಲಸ ಮಾಡಲಾರಂಭಿಸಿದರು. ಪಂಡಿತ ಭಗವಾನದೀನರು ವಾಂತಿ-ಭೇದಿಯಿಂದ ಸತ್ತರು. ಹಾಂ, ಕಿಶನಪಾಲ ಸಿಂಗ್ ಹಿಂದಿನಂತೆಯೇ ಸೇಂದಿ ಇಳಿಸುವ ಧಂದೆ ಮಾಡುತ್ತಿದ್ದರು. ಅವರು ಅನೇಕ ವರ್ಷಗಳ ಕಾಲ ಒಂದೇ ಸಮನೆ ಪಂಚಾಯತಿಯ ಅಧ್ಯಕ್ಷರಾಗಿದ್ದರು. ಹಳ್ಳಿಯಲ್ಲಿ ಅವರ ಬಂಗ್ಲೆ ನಿರ್ಮಾಣಗೊಂಡಿತು, ನಂತರ ಅವರು ಎಮ್‌ಎಲ್‌ಎ ಆದರು.

ಸಾಕಷ್ಟು ವರ್ಷಗಳು ಕಳೆದವು. ಟೇಪಚೂ ಬಗ್ಗೆ ನನಗೆ ತುಂಬಾ ದಿನಗಳಾದರೂ ವಿಷಯ ತಿಳಿಯಲಿಲ್ಲ. ಆದರೆ, ಅವನು ಕೆಲಸ ಮಾಡುತ್ತಿದ್ದ ಪರಿಸ್ಥಿತಿ ಮತ್ತು ತನ್ನ ಶಕ್ತಿಯನ್ನು ಕೆಲಸಕ್ಕಾಗಿ ವಿನಿಯೋಗಿಸುತ್ತಿದ್ದ ರೀತಿ, ಅವನ ಜೀವಕ್ಕೆ ಮುಳುವಾಗುತ್ತಿತ್ತು ಎಂಬುದಂತೂ ನಿಶ್ಚಿತವಾಗಿತ್ತು.

ಟೇಪಚೂ ಬೈಲಾಡಿಲಾಕ್ಕೆ ಬಂದಾಗ ನನಗೆ ಅವನ ಪರಿಚಯವಾಯಿತು. ಕಿಶನಪಾಲ ಸಿಂಗ್ ಅವನನ್ನು ಗೂಂಡಾಗಳಿಂದ ಮನಸಾರೆ ಥಳಿಸಿದ್ದ ವಿಷಯ ತಿಳಿಯಿತು. ಗೂಂಡಾಗಳು ಅವನು ಸತ್ತನೆಂದು ತಿಳಿದು ಅವನನ್ನು ಸೋನ್ ನದಿಯಲ್ಲಿ ಎಸೆದಿದ್ದರು. ಆದರೆ, ಅವನು ಸುರಕ್ಷಿತವಾಗಿ ಪಾರಾದ. ಅಂದು ರಾತ್ರಿಯೇ ಕಿಶನಪಾಲ ಸಿಂಗ್‌ರ ಜೋಳದ ತೆನೆ ಕಣಜಕ್ಕೆ ಬೆಂಕಿ ಹಾಕಿ ಬೈಲಾಡಿಲಾಕ್ಕೆ ಬಂದ. ನಾನು ಅವನ ಬಗ್ಗೆ ಶಿಫಾರಸ್ ಮಾಡಿದೆ, ಅವನನ್ನು ಕೂಲಿಯಾಳುಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಯಿತು.

ಅದು ಸನ್ ಎಪ್ಪತ್ತೆಂಟರ ವರ್ಷವಾಗಿತ್ತು.

ನಮ್ಮ ಕಾರ್ಖಾನೆ ಜಪಾನಿನ ಸಹಕಾರದಿಂದ ನಡೆಯುತ್ತಿತ್ತು. ನಾವು ಎಷ್ಟು ಕಚ್ಚಾ ಲೋಹವನ್ನು ತಯಾರಿಸುತ್ತಿದ್ದೆವೋ, ಅದರ ಬಹುತೇಕ ಪಾಲನ್ನು ಜಪಾನಿಗೆ ಕಳುಹಿಸಲಾಗುತ್ತಿತ್ತು. ಕೂಲಿ ಕಾರ್ಮಿಕರು ಹಗಲು-ರಾತ್ರಿ ಗಣಿಗಳಲ್ಲಿ ಕೆಲಸ ಮಾಡಬೇಕಿತ್ತು.

ಟೇಪಚೂ ಈ ನಡುವೆ ತನ್ನ ಜೊತೆಗಾರರೊಂದಿಗೆ ಸಂಪೂರ್ಣವಾಗಿ ಬೆರೆತಿದ್ದ. ಎಲ್ಲರೂ ಅವನನ್ನು